UASB
LIBRARY
Newspaper Clippings
Pg .1 Tuesday 21-09-2021 Jai Kisan



2019-20ನೇ ಸಾಲಿನಲ್ಲಿ ತೇರ್ಗಡೆಯಾಗಿರುವ 1012 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಇಂದು ಬೆಂ.ಕೃಷಿ ವಿವಿಯ 55ನೇ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 55ನೇ ಘಟಿಕೋತ್ಸವ ಸೆ.21ರಂದು ನಡೆಯಲಿದ್ದು 2019-20ನೇ ಶೈಕ್ಷಣಿಕ ವರ್ಷದಲ್ಲಿ ತೇರ್ಗಡೆಯಾಗಿರುವ 1012 ವಿದ್ಯಾರ್ಥಿಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಪದವಿ ಪ್ರದಾನ ಮಾಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿವಿ ಕುಲಪತಿ

- **ಆಶಾ ಕಿರಣ್ (ಬೆಂಗಳೂರು); ಕೃಷಿ; 13, ಜಿ.ಮೋನಿಕಾ (ಮಂಡ್ಯ); ಕೃಷಿ; 10 ಚಿನ್ನದ ಪದಕ**

ಡಾ.ಎಸ್.ರಾಜೇಂದ್ರ ಪ್ರಸಾದ್, ಬೆಳಗ್ಗೆ 11 ಗಂಟೆಗೆ ಜಿಕೆವಿಕೆಯ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕಾರ್ಯಕ್ರಮ ನಡೆಯಲಿದ್ದು ಕೃಷಿ ಸಚಿವ ಬಿ.ಸಿ. ಪಾಟೀಲ್, ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಡಾ.ತ್ರಿಲೋಚನ್ ಮಹಪಾತ್ರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

659 ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ ಪದವಿಗಳನ್ನು 279 ವಿದ್ಯಾರ್ಥಿ. ಗಳಿಗೆ ವಿವಿಧ ಸ್ನಾತಕೋತ್ತರ ಪದವಿಗಳನ್ನು ಹಾಗೂ 74 ವಿದ್ಯಾರ್ಥಿಗಳಿಗೆ ಡಾಕ್ಟೊರೆಲ್ ಪದವಿ ಪ್ರದಾನ ಮಾಡಲಾಗುವುದು ಎಂದು ಹೇಳಿದರು.

ಡಾಕ್ಟರ್ ಆಫ್ ಫಿಲಾಸಫಿ ಪದವಿಯಲ್ಲಿ ಒಟ್ಟು 21 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಗುವುದು. ಹಾಗೆಯೇ ಸ್ನಾತಕೋತ್ತರ ಪದವಿ ಭಾಗದಲ್ಲಿ74 ಚಿನ್ನದ ಪದಕಗಳನ್ನು, ಸ್ನಾತಕ ಪದವಿಯಲ್ಲಿ 55 ಚಿನ್ನದ ಪದಕಗಳನ್ನು ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಒಟ್ಟು61 ವಿದ್ಯಾರ್ಥಿಗಳಿಗೆ 49 ವಿಶ್ವವಿದ್ಯಾನಿಲಯದ ಚಿನ್ನದ ಪದಕಗಳನ್ನು 82 ದಾನಿಗಳ ಚಿನ್ನದ ಪದಕಗಳನ್ನು ಹಾಗೂ 19 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು ಎಂದು ತಿಳಿಸಿದರು. ಕುಲಸಚಿವ ಬಸವೇಗೌಡ, ಶಿಕ್ಷಣಿಕ ನಿರ್ದೇಶಕ ಡಾ.ಕೆ. ಪಿನಾರಾಯಣ ಸ್ವಾಮಿ, ದೇವ್ ಕುಮಾರ್, ಡಾ.ಕೆ. ಶಿವರಾಮು ಇತರರು ಇದ್ದರು.



ಚಿನ್ನದ ಪದಕ ವಿಜೇತರು

ದಿಶಾಂತ್ ಜೋಜಿತ್ ಜೇಮ್ಸ್ (ಕೃಷಿ ವಿಭಾಗ), ಕಿರಣ್ ಎಸ್.ಕೆ.(ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ), ಸ್ನೇಹಲಗರಿ (ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ), ಮನೋಜ್ ಕೆ.ಎನ್ (ಬೇಸಾಯ ವಿಭಾಗ), ಪ್ರಿಯಾಂಕ ಎಂ. (ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ), ನಳಿನಿ ಬಿ.ಎಸ್. (ಕೃಷಿ ಸೂಕ್ಷ್ಮ ಜೀವಿಶಾಸ್ತ್ರ).

ಸ್ನಾತಕೋತ್ತರ ಪದವಿ ವಿಭಾಗ ವಿಜೇತರು: ಸುಪ್ರೀತ ರಾಡ್ ಡಿ.ಎಸ್ (ಅನುವಂಶೀಯ ಮತ್ತು ಸಸ್ಯ ತಳಿ ಅಭಿವೃದ್ಧಿಶಾಸ್ತ್ರ), ರಾಮು ಎಂ.ಎಸ್.(ಕೃಷಿ ಅರ್ಥ ಶಾಸ್ತ್ರ), ವಿನಯ್ ಕುಮಾರ್ ಎಂ. (ಬೇಸಾಯ ಶಾಸ್ತ್ರ), ಜೆ.ಅವಿನಾಶ್ (ಕೃಷಿ ಸಂಖ್ಯಾ ಶಾಸ್ತ್ರ),

ಸ್ನಾತಕ ಪದವಿ-ಬಿಎಸ್ಸಿ (ಕೃಷಿ) ವಿಭಾಗ:ಮೋನಿಕ ಜ (ಕೃಷಿ ಮಹಾವಿದ್ಯಾನಿಲಯ ಮಂಡ್ಯ), ಆಶಾ ಕಿರಣ್ (ಕೃಷಿ ವಿವಿ ಬೆಂಗಳೂರು), ಶಾಂಭವಿ ಎಚ್.ಟಿ (ಕೃಷಿ ಮಹಾವಿದ್ಯಾಲಯ ಹಾಸನ), ಮಾನಸ ಎಂ.ಎಸ್. (ಕೃಷಿ ಮಹಾವಿದ್ಯಾನಿಲಯ, ಬೆಂಗಳೂರು).

ಬಿ.ಟೆಕ್ (ಕೃಷಿ ಎಂಜಿನಿಯರಿಂಗ್): ಸ್ಮಿತಾ ಟಿ.ಎಸ್ (ಕೃಷಿ ಎಂಜಿನಿಯರಿಂಗ್ ಮಹಾವಿದ್ಯಾಲಯ, ಬೆಂಗಳೂರು).

ಬಿಟೆಕ್ (ಕೃಷಿ ಜೈವಿಕ ತಂತ್ರಜ್ಞಾನ): ಪ್ರಿಯಾಂಕ ಎಸ್.(ಕೃಷಿ ಮಹಾ ವಿದ್ಯಾಲಯ, ಹಾಸನ).

ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ: ರುಚಿ ದಹಿಯ (ಕೃಷಿ ಮಹಾ ವಿದ್ಯಾಲಯ,ಹಾಸನ).

ಬಿಎಸ್ಸಿ ರೇಷ್ಮೆ ಕೃಷಿ: ಮೇಘನ ಡಿ.ಎಂ.(ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿ).

ಚಿನ್ನದ ಪದಕ ಪ್ರದಾನ ಇಲ್ಲ

ಕೀಟಶಾಸ್ತ್ರವಿಭಾಗದ (ಪಿ.ಎಚ್‌ಡಿ) ಚಿನ್ನದ ಪದಕ ಪ್ರದಾನವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ. ಸರಾಸರಿ ಅಂಕ ಗಳಿಕೆಯಲ್ಲಿಮುಂಚೂಣಿಯಲ್ಲಿದ್ದ ವಿದ್ಯಾರ್ಥಿನಿಯೊಬ್ಬರಿಗೆ ಚಿನ್ನದ ಪದಕ ನೀಡಬೇಕಿತ್ತು. ಆಕೆ ಮಂಡಿಸಿದ ಎರಡು ಪ್ರಬಂಧಗಳು ಯಾವುದಾದರೂ ಪತ್ರಿಕೆಯಲ್ಲಿಪ್ರಕಟವಾಗಿರಬೇಕು. ಆಕೆಯ ಒಂದು ಪ್ರಬಂಧ ಪತ್ರಿಕೆಯಲ್ಲಿಪ್ರಕಟವಾಗಿಲ್ಲಎಂದು ನಾಗರಾಜ್ ಎಂಬುವವರು ದೂರಿದ್ದಾರೆ. ಈ ಸಂಬಂಧ ಅಗತ್ಯ ದಾಖಲೆಗಳನ್ನುಸಲ್ಲಿಸುವುದಾಗಿ ಹೇಳಿದ್ದಾರೆ. ಆ ಹಿನ್ನೆಲೆಯಲ್ಲಿ 'ಕೀಟಶಾಸ್ತ್ರವಿಭಾಗದ (ಪಿ.ಎಚ್‌ಡಿ) ಚಿನ್ನದ ಪದಕ ಪ್ರದಾನವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ ಎಂದು ಬೆಂಗಳೂರು ಕೃಷಿ ವಿವಿಯ ಕುಲಪತಿ ಎಂದು ರಾಜೇಂದ್ರ ಪ್ರಸಾದ್ ಹೇಳಿದ್ದಾರೆ. ನಾಗರಾಜ್ ಎಂಬುವವರು ಸಲ್ಲಿಸಲಿರುವ ದಾಖಲೆಗಳ ಸತ್ಯತೆಯನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿ ನೀಡುವ ವರದಿಯ ಆಧಾರದಲ್ಲಿ ಅರ್ಹರಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ಬೆಂ. ಕೃಷಿ ವಿವಿ ಘಟಿಕೋತ್ಸವ 1012 ವಿದ್ಯಾರ್ಥಿಗಳಿಗೆ ಪದವಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 55ನೇ ಘಟಿಕೋತ್ಸವ ವಿವಿ ಕ್ಯಾಂಪಸ್ ಜಿಕೆವಿಕೆ ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರಾಷ್ಟ್ರೀಯ ಸಭಾಂಗಣದಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಘಟಿಕೋತ್ಸವದಲ್ಲಿ 2019-20ರ ಶೈಕ್ಷಣಿಕ ವರ್ಷದಲ್ಲಿ ತೇರ್ಗಡೆಯಾದ 1012 ವಿದ್ಯಾರ್ಥಿಗಳಿಗೆ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಗುತ್ತದೆ.

ಘಟಿಕೋತ್ಸವ

ಒಟ್ಟು ಅದರಲ್ಲಿ 659 ವಿದ್ಯಾರ್ಥಿಗಳು ವಿವಿಧ ಸ್ನಾತಕ ಪದವಿಗಳನ್ನು 279 ವಿದ್ಯಾರ್ಥಿಗಳು ವಿವಿಧ ಸ್ನಾತಕೋತ್ತರ ಪದವಿಗಳು ಹಾಗೂ 74 ವಿದ್ಯಾರ್ಥಿಗಳು ಡಾಕ್ಟರೇಟ್ ಪದವಿ ಪಡೆಯಲಿದ್ದಾರೆ. ಡಾಕ್ಟರ್‌ಆಫ್ ಫಿಲಾಸೊಫಿ ಪದವಿಯನ್ನು ಒಟ್ಟು 21 ಚಿನ್ನದ ಪದಕಗಳನ್ನು ಪ್ರಧಾನ ಮಾಡಲಿದ್ದು, ಅದರಲ್ಲಿ 05 ವಿದ್ಯಾರ್ಥಿನಿಯರು 7 ವಿದ್ಯಾರ್ಥಿಗಳು ಕೃಷಿಯ 12ಚಿನ್ನದ ಪದಕಗಳು, 8 ದಾನಿಗಳ ಚಿನ್ನದ ಪದಕಗಳು ಹಾಗೂ 1 ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪಮಾಣಪತ್ರ ನೀಡಲಿದ್ದಾರೆ.

15-09-2021
Uv Pg 03

15-09-2021
Hd Pg 01

ರೈತರಿಗೂ ಗೌರವ ಡಾಕ್ಟರೇಟ್

ಬೆಂಗಳೂರು: ಗಣ್ಯ ಸಾಧಕರಿಗೆ ಮಾತ್ರ ಸಿಗುತ್ತಿದ್ದ ಗೌರವ ಡಾಕ್ಟರೇಟ್ ಪದವಿ ಇನ್ನು ಮುಂದೆ ರೈತರಿಗೂ ಸಿಗಲಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಮುಂದಿನ ವರ್ಷದ ಘಟಿಕೋತ್ಸವದಲ್ಲಿ ರೈತರಿಗೆ ಗೌರವ ಡಾಕ್ಟರೇಟ್ ನೀಡಲು ನಿರ್ಧರಿಸಿದೆ. ಇದೇ ಮೊದಲ ಬಾರಿಗೆ ಕೃಷಿ ವಿವಿ ರೈತರನ್ನು ಗೌರವಿಸುವ ಕಾರ್ಯಕ್ಕೆ ಮುಂದಾಗಿದೆ.

''ಈ ವರ್ಷ ಸೆ.21ರಂದು ನಡೆಯುವ 55ನೇ ಘಟಿಕೋತ್ಸವದಲ್ಲಿಯೇ ಗೌರವ ಡಾಕ್ಟರೇಟ್ ಪದವಿಗಾಗಿ ರೈತರನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿತ್ತು. ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರ ಮಾಡಿದ, ಆದಾಯ ಮಾರ್ಗದಲ್ಲಿ ಹೊಸತನ ಕಂಡಿರುವ ಮಾದರಿ ರೈತರನ್ನು ಗುರುತಿಸಿ ಕೃಷಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗೆ ಅನುಗುಣವಾಗಿ ಅವರಿಗೆ ಗೌರವ ಡಾಕ್ಟರೇಟ್ ನೀಡಲು ನಿರ್ಧರಿಸಿದ್ದೆವು. ಆದರೆ ಕೋವಿಡ್ ಮಹಾ ಮಾರಿಯಿಂದಾಗಿ ಈ ವರ್ಷ ಆಯ್ಕೆ ಮಾಡುವುದು ಸಾಧ್ಯವಾಗಲಿಲ್ಲ, ಮುಂದಿನ ವರ್ಷ ನಡೆಯುವ 56ನೇ ಘಟಿಕೋತ್ಸವದಲ್ಲಿ ರೈತರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು,'' ಎಂದು ವಿವಿ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

''ಸೆ.21ರಂದು 55ನೇ ಘಟಿಕೋತ್ಸವ ನಡೆಯಲಿದ್ದು, 2019-20ರಲ್ಲಿ ತೇರ್ಗಡೆಯಾದ 1012 ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. ಈ ಪೈಕಿ 659 ವಿದ್ಯಾರ್ಥಿಗಳು ಸ್ನಾತಕ ಪದವಿ, 279 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಹಾಗೂ 74 ವಿದ್ಯಾರ್ಥಿಗಳು ಡಾಕ್ಟೋರಲ್ ಪದವಿಗಳನ್ನು ಪಡೆಯಲಿದ್ದಾರೆ,'' ಎಂದರು.

55ನೇ ಘಟಿಕೋತ್ಸವವು ಸೆ.21ರಂದು ಬೆಳಗ್ಗೆ 11 ಗಂಟೆಗೆ ಜಿಕೆವಿಕೆಯ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ನಡೆಯಲಿದೆ. ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡುವರು.

ಗೋಷ್ಠಿಯಲ್ಲಿ ವಿವಿ ಕುಲಸಚಿವ ಡಾ. ಬಸವೇಗೌಡ, ಕೃಷಿ ವಿವಿಯ ಡಾ. ಕೆ. ಶಿವರಾಂ, ವಿಸ್ತರಣಾ ನಿರ್ದೇಶಕ ಎನ್. ದೇವ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

21-09-2021 Vk Pg 02

10 ಚಿನ್ನದ ಪದಕ ಮುಡಿಗೆ ಏರಿಸಿಕೊಂಡ ಮೋನಿಕಾ

ಮಧುಗಿರಿ: ಮಂಡ್ಯದ ಜಿಕೆವಿಕೆ ವಿಶ್ವವಿದ್ಯಾಲಯದಲ್ಲಿ ಬಿಎಸ್ಸಿ ಅಗ್ರಿಕಲ್ಚರ್‌ನಲ್ಲಿ ಮೋನಿಕಾ ಜಿ. ಅವರು ಬರೋಬ್ಬರಿ 10 ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡು ಗಮನ ಸೆಳೆದಿದ್ದಾಳೆ.



ತಾಲೂಕಿನ ಗೂಲಹಳ್ಳಿಯ ಮೋನಿಕಾ ಜಿ.ತನ್ನ 22ನೇ ವಯಸ್ಸಿನಲ್ಲೇ ಈ ಸಾಧನೆ ಮಾಡಿದ್ದಾರೆ. ತಾಲೂಕಿನ ಕಂತಾನ್ನ ಹಳ್ಳಿಯ ಸರ್ಕಾರಿ ಶಾಲೆಯ ಶಿಕ್ಷಕ ಗೋವಿಂದರಾಜು-ಅಶ್ವತ್ಥಮ್ಮ ದಂಪತಿಯ 2 ನೇ ಪುತ್ರಿ ಮೋನಿಕಾ.

ಮೋನಿಕಾ ಬಾಲ್ಯದ ಶಿಕ್ಷಣವನ್ನು ಐಡಿಹಳ್ಳಿಯ ಐಎನ್‌ಎ ಶಾಲೆಯಲ್ಲಿ ಮುಗಿಸಿ 5 ರಿಂದ ಪಟ್ಟಣದ ಎಂಜಿಎಂ ಬಾಲಕಿಯರ ಶಾಲೆಯಲ್ಲಿ ಓದಿ 2014 ರಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿದರು. ನಂತರ ಮೂಡಬಿದರೆಯ ಆಳ್ವಾಸ್ ಕಾಲೇಜಿನಲ್ಲಿ ಪಿಯುಸಿ ಮುಗಿಸಿ ನಂತರ ಮಂಡ್ಯದ ಜಿಕೆವಿಕೆ ವಿವಿಯಲ್ಲಿ ಬಿಎಸ್ಸಿ ಅಗ್ರಿಕಲ್ಚರ್ ತರಗತಿಗೆ ಸೇರಿ ಸತತ 4 ವರ್ಷಗಳ ಕಾಲ ಹಾಸ್ಟೆಲ್‌ನಲ್ಲಿದ್ದು ವ್ಯಾಸಂಗ ಮುಗಿಸಿದರು.

ಶೇ.9.11 ಅಂಕ: ವಿವಿಯಲ್ಲಿ ನೀಡುವ ಗ್ರೇಸ್ ಅಂಕ 10 ರಲ್ಲಿ ಶೇ.9.11 ಅಂಕ ಪಡೆದು ಅಗ್ರ ಶ್ರೇಣಿಯಲ್ಲಿ ಉತ್ತೀರ್ಣರಾಗಿ 10 ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ಅದರಲ್ಲಿ 1 ಚಿನ್ನದ ಪದಕ ಜಿಕೆವಿಕೆಯಿಂದ ನೀಡಿದರೆ, ಒಂದು ಕುಲಪತಿಗಳಿಂದ ಹಾಗೂ ಮತ್ತೊಂದು ಸ್ಥಳೀಯ ವಿಧಾನಪರಿಷತ್ ಸದಸ್ಯರಿಂದ ಮತ್ತೆ 7 ಪದಕಗಳು ಶಿಕ್ಷಣವನ್ನು ಪ್ರೋತ್ಸಾಹಿಸುವ ಕೊಡುಗೆದಾರರಿಂದ ಪಡೆಯಲಿದ್ದಾರೆ.

ರೈತರಿಗೂ ಗೌರವ ಡಾಕ್ಟರೇಟ್ ನೀಡಲು ನಿರ್ಧಾರ

ಬೆಂಗಳೂರು: ಬೆಂಗಳೂರು ಕೃಷಿ ವಿವಿಯು ಹೊಸ ಆಲೋಚನೆಗೆ ಮನ್ನುಡಿ ಬರೆದಿದೆ. ಮುಂದಿನ ವರ್ಷದಿಂದ ಸಾಧಕ ರೈತರಿಗೂ ಗೌರವ ಡಾಕ್ಟರೇಟ್ ಪದವಿ ನೀಡಲು ತೀರ್ಮಾನಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್, ಈ ಬಗ್ಗೆ ಮಾಹಿತಿ ನೀಡಿದರು. ಈ ವರ್ಷವೇ ರೈತರಿಗೂ ಕೃಷಿ ವಿವಿಯಿಂದ ಗೌರವ ಡಾಕ್ಟರೇಟ್ ನೀಡುವ ಕುರಿತು ಚರ್ಚೆ ನಡೆದಿತ್ತು. ಆದರೆ ಕೋವಿಡ್ ಇದ್ದ ಹಿನ್ನೆಲೆಯಲ್ಲಿ ತೊಡಕುಂಟಾಯಿತು ಎಂದು ಹೇಳಿದರು.

ಕೃಷಿ ಕ್ಷೇತ್ರದಲ್ಲಿ ಹೊಸ ಆವಿಷ್ಕಾರ ಮಾಡಿದ ಮಾದರಿ ರೈತರನ್ನು ಗುರುತಿಸಿ ಗೌರವಿಸುವುದು ಕೃಷಿ ವಿವಿಯ ಉದ್ದೇಶವಾಗಿದೆ. ಯಾವ ವಿವಿ ಕೂಡ ಇಲ್ಲಿಯ ವರೆಗೆ ಇಂತಹ ನಿರ್ಧಾರ ಕೈಗೊಂಡಿರಲಿಲ್ಲ, ಆದರೆ ಬೆಂಗಳೂರು ಕೃಷಿ ವಿವಿ ಮಾತ್ರ ಇಂತಹ ನಿರ್ಧಾರ ಕೈಗೊಂಡಿದೆ ಎಂದು ತಿಳಿಸಿದರು.

ಆ ಹಿನ್ನೆಲೆಯಲ್ಲಿ ಮುಂದಿನ ವರ್ಷ ನಡೆಯುವ 56ನೇ ಘಟಿಕೋತ್ಸವದಲ್ಲಿ ಸಾಧಕ ರೈತರನ್ನು ಶೋಧಿಸಿ ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುವುದು. ಇದಕ್ಕಾಗಿಯೇ ಕೆಲವು ಮಾನದಂಡಗಳನ್ನು ರೂಪಿಸಲಾಗುವುದು. ಸಾಧಕ ರೈತರಿಗೆ ಗೌರವ ಡಾಕ್ಟರೇಟ್ ನೀಡುವ ಹೊಸ ಪರಿಕಲ್ಪನೆ ಮುಂದಿನ ವರ್ಷದಿಂದಲೇ ಆರಂಭವಾಗಲಿದೆ ಸ್ಪಷ್ಟಪಡಿಸಿದರು.

ಕೃಷಿ ವಿವಿಯಲ್ಲಿ ಹೊಸ ಶೈಕ್ಷಣಿಕ ನೀತಿ ಜಾರಿ: ಕೇಂದ್ರ ಸರ್ಕಾರದ ಹೊಸ ಶೈಕ್ಷಣಿಕ ನೀತಿಯ ಬಗ್ಗೆ ಮಾತನಾಡಿದ ಅವರು ಹೊಸ ಶಿಕ್ಷಣ ನೀತಿ ಜಾರಿ ಕುರಿತಂತೆ ಕೃಷಿ ವಿಶ್ವವಿದ್ಯಾನಿಲಯ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದೆ. ಕೃಷಿ ವಿವಿಯಲ್ಲಿ ಶೇ.70ರಷ್ಟು ಹೊಸ ಶೈಕ್ಷಣ ರೀತಿಯಲ್ಲೆ ಚಟುವಟಿಕೆಗಳು ನಡೆಯುತ್ತಿವೆ.ಆ ಹಿನ್ನೆಲೆಯಲ್ಲಿ ಹೊಸ ಶೈಕ್ಷಣಿಕ ನೀತಿಗೆ ಯಾವುದೇ ರೀತಿಯ ತೊಂದರೆ ಉಂಟಾಗದು ಎಂದು ತಿಳಿಸಿದರು.

ಹೊಸ ಶಿಕ್ಷಣ ನೀತಿಯ ಕುರಿತಂತೆ ದೆಹಲಿಯಲ್ಲಿ ಸೆ.28 ಕೃಷಿ ವಿವಿಯ ಹಿರಿಯ ಅಧಿಕಾರಿಗಳ ಸಭೆ ನಡೆಯಲಿದೆ. ಅಲ್ಲಿ ಕೂಡ ಈ ಬಗ್ಗೆ ಚರ್ಚೆ ನಡೆಯಲಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗಲು ರಾಷ್ಟ್ರ ಮಟ್ಟದ ಪಠ್ಯ ಶೇ.60ರಷ್ಟು ಸ್ಥಳೀಯ ಪಠ್ಯ ಶೇ.40ರಷ್ಟು ಇರಬೇಕು ಎಂಬ ಚರ್ಚೆ ಕೂಡ ನಡೆದಿದೆ. ಏಕಪಠ್ಯ ವ್ಯವಸ್ಥೆ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

21-09-2021 Uv Pg 05

UAS-B convocation today

21-09-2021
Hindu
Pg 03

STAFF REPORTER
BENGALURU

A total of 1,012 students will be conferred with various degrees, of which 659 will receive their bachelor's, 279 their master's, and 74 students will receive doctoral degrees at the convocation of the University of Agricultural Sciences (UAS), Bangalore, on Tuesday.

During the 55th convocation for the academic year 2019-20, in the doctoral degree programmes, seven boys and five girls will be awarded a total of 21 gold medals, a release said.

In the Master's programmes, 16 boys and 17 girls will get 74 gold medals, while in the UG programmes, five boys and 11 girls will be receiving 55 gold medals.

UAS-B, with its six teaching campuses at Bengaluru, Chintamani, Hassan, Mandya, and Chamarajanagar, offers six UG degree programmes, master's degree programmes in 23 disciplines, and doctoral degree programmes in 16 disciplines.

21-09-2021
Time of Ind
Pg 05

B'luru scientists discover 2 new ant species in Arunachal

S Bhuvaneshwari | TNN

Bengaluru: Entomologists from Ashoka Trust for Research in Ecology and the Environment (ATREE) in Bengaluru have discovered two new species of rare ants, from Eaglenest Wildlife Sanctuary (EWS) in Arunachal Pradesh. This new discovery was published in the latest issue of the journal ZooKeys, a leading taxonomy journals.

With ATREE celebrating its silver jubilee this year, one species is named as Parasyscia ganeshaiahi, in honour of one of its founders prof K N Ganeshaiah. He is an eminent ecologist, agricultural scientist and retired professor of University of Agricultural Sciences, Bengaluru. The other species, the first record of that ant genus in India, was named as Syscia indica.



There are 800 species of ants in India

Parasyscia ganeshaiahi has a distinct yellowish brown body with numerous macro punctures and smooth interspaces. **Syscia indica** is a blind ant with a reddish-brown coloured body and numerous small, closely-spaced punctures.

After extensive exploration in the EWS and extensive studies, a team of researchers led by Dr Priyadarsanan Dharma Rajan (senior fellow), Aswaj Punnath, Sahanashree (ATREE, Bengaluru) and Dr Aniruddha Marathe (IISc, Bengaluru) found the two species.

There are 800 species of ants in India and in the last three years, ATREE alone has found 30 species including many new in northeastern region.